REVIEW OF RESEARCH
ISSN: 2249-894X
IMPACT FACTOR : 5.2331(UIF)
VOLUME - 7 | ISSUE - 6 | MARCH - 2018

# ಶರಣರ ದೃಷ್ಟಿಯಲ್ಲಿ ಜಾತೀಯತೆಯ ನಿಲುವುಗಳು

**ಶಿವಶರಣಪ್ಪ ಪಿ.ಎಚ್. ಕೋಡ್ಲಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗು.ವಿ. ಗುಲಬರ್ಗಾ




ವಿಶ್ವ ಇತಿಹಾಸವನ್ನು ಅವಲೋಕಿಸಿದರೆ, ಜಾತಿಯ ನಿರ್ಮೂಲನೆಗಾಗಿ ಸರ್ವರು ಒಟಂದವಾಗಿ ಹೋರಾಟ ಮಡಿದ ಶರಣರನ್ನು ಬಿಟ್ಟರೆ ಮತ್ತಾವ ನಿದರ್ಶನ ಕಾಣುವುದಿಲ್ಲ. ಬೌದ್ಧ ಧರ್ಮ, ಕ್ರಿಶ್ಚಿಯನ್ ಧರ್ಮ, ಮುಸ್ಲಿಂ ಧರ್ಮ, ಸಿಖ್ ಧರ್ಮ ಇವು ಎಲ್ಲವುಗಳ ಕಾಲಕಾಲಕ್ಕೆ ಪರಿವರ್ತನೆಯಾಗಿ ಒಳ ಪಂಗಡಗಳಾಗಿರುವುದನ್ನು ಕಾಣುತ್ತೇವೆ. ಆದರೆ ಶರಣ ಧರ್ಮ, ಬಸವ ಧರ್ಮ 800 ವರ್ಷಗಳಾದರು ಒಡೆದು ಛಿದ್ರವಾಗಲಿಲ್ಲ. ಏಕೆಂದರೆ ಶರಣರಲ್ಲಿ ಮೇಲು–ಕೀಳು ಎನ್ನುವ ಭಾವನೆಯಿಲ್ಲ. ಸರ್ವರು ಸಮಾನರೆಂಬ ಧೋರಣೆಯ ಹಿನ್ನೆಲೆಯಲ್ಲಿ ಅವರ ವಚನ ಸಾಹಿತ್ಯ ಮೂಡಿಬಂದಿದೆ. ಶುದ್ಧ ಶೀಲ ಸಮಾಜವನ್ನು ಕಟ್ಟುವಲ್ಲಿ ಶರಣರ ಶ್ರಮಿಕತನ ಪ್ರಮಾಣಿಕವಾದದ್ದು.

ಬಸವಣ್ಣನವರು ವೈದಿಕ ಪಾಂಡಿತ್ಯ, ವೈದಿಕಶಾಯಿಯ ದಬ್ಬಾಳಿಕೆಗಳನ್ನು ಪ್ರತಿರೋಧಿಸುತ್ತಾ, ಪಾಂಡಿತ್ಯಕ್ಕೂ ವ್ಯಕ್ತಿಯ ಜಾತಿಗೂ ಸಂಬಂಧವಿಲ್ಲ ಎನ್ನುತ್ತಾರೆ. ಇದಕ್ಕೆ ಈ ವಚನ ನಿದರ್ಶನ

“ವ್ಯಾಸ ಭೋವಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ,
ಮಂಡೋದರಿ ಕಪ್ಪೆಯ ಮಗಳು, ಕುಲವನರಸದಿರು ಭೊ !
ಕುಲದಿಂದ ಮುನ್ನೇನಾದಿರಂ ಭೋ !
ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದುರ್ವಾಸ ಮಚ್ಚಿಗ, ಕಶ್ಯಪ ಕಮ್ಮಾರ,
ಕೌಂಡಿನ್ಯನೆಂಬ ಋಷಿ ಮೂರು ಭುವನವರಿಯೆಯ ನಾವಿದ ಕಾಣಿ ಭೊ !
ನಮ್ಮ ಕೂಡಲ ಸಂಗನ ವಚನವಿಂತೆಂದುದು;
ಶ್ಯಪ ಚೋಪಿಯಾದಡೇನು, ಶಿವಭಕ್ತನೇ ಕುಲಜಂ ಭೋ !”

ಇಲ್ಲಿ ಬರುವ ವಿದ್ವಾಂಸರೆಲ್ಲಾ ಕೆಳಜಾತಿಯವರೆ, ಅವರ ಜನನಕ್ಕೂ ಅವರ ಪಾಂಡಿತ್ಯಕೂ ಯಾವುದೇ ರೀತಿಯ ಸಂಬಂದವಿಲ್ಲ, ಜಾತಿಗೂ ಜ್ಞಾನಕ್ಕೂ ಯಾವುದೇ ಸಂಬಂಧವಿಲ್ಲ, ಜಾತಿಯೆಂಬುದು ಮಾನಸಿಕವಾದುದು, ದೈಹಿಕವಾದುದಲ್ಲ. ಜಾತಿಯ ಪ್ರಕಾರ ನಮ್ಮ ಅಂಗಾಂಗ ರಚನೆಯಾಗಿರುವುದಿಲ್ಲ, ಮಾನವ ಪ್ರತಿಭೆ ಜಾತಿಗಳ ಕಾಣಿಕೆ, ವೈದಿಕಶಾಯಿಗಳು ತಾವು ಬದುಕಲು ಮಾಡಿಕೊಂಡ ಒಂದು ಅನಿಷ್ಟ ಕವಚವಿದು. ಇದನ್ನು ಒಡೆದು ಸಿಡಿದೆದ್ದು ನಿಂತವರು ಬಸವಣ್ಣನವರು.

ಜೇಡರ ದಾಸಿಮಯ್ಯನವರು ಜಾತೀಯತೆಯನ್ನು ಕುರಿತು ಹೀಗೆ ಹೇಳುತ್ತಾರೆ

“ಮೊಲೆ ಮೂಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ಇವೆರಡರ ನಡುವೆ ಸುಳಿವ ಆತ್ಮ
ಗಂಡೂ ಅಲ್ಲ ಹೆಣ್ಣೂ ಅಲ್ಲ ರಾಮನಾಥ”

ಕೇವಲ ಮನುಷ್ಯನ ಬಾಹ್ಯ ಲಕ್ಷಣವನ್ನು ನೋಡಿ ಹೆಣ್ಣು, ಗಂಡು ಎಂದು ನಿರ್ಧರಿಸುತ್ತೇವೆ. ಆದರೆ ದೇಹದಲ್ಲಿ ಸುಳಿವ ಆತ್ಮಕ್ಕೆ ಬಣ್ಣವಿಲ್ಲ, ಜಾತಿಯಿಲ್ಲ. ಅದಕ್ಕೆ ಕೂಲ ಹೊಲೆಯ ಸೂತಕವಿಲ್ಲ, ಇಬ್ಬರಲ್ಲಿ ಸುಳಿಯುವ ಆತ್ಮ ಒಂದೆ ಎಂದು ಹೇಳುವುದರ ಮೂಲಕ ಜಾತಿ ವ್ಯವಸ್ಥೆಯನ್ನು ಖಂಡಿಸುತ್ತಾರೆ.

ಹನ್ನೆರಡನೆಯ ಶತಮಾನದಲ್ಲಿ ಸುಮಾರು 150 ವಚನಕಾರರಲ್ಲಿ ಮೂವತ್ತಕ್ಕೂ ಹೆಚ್ಚು ವಚನಕಾರ್ತಿಯರಿದ್ದರು. ಇದರಲ್ಲಿ ಅರ್ಧದಷ್ಟು ವಚನಕಾರರು ಕೆಳವರ್ಗದಿಂದಲೇ ಬಂದಿದ್ದರು. ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಅಸ್ಪೃಶ್ಯತೆ ವಿರುದ್ಧ ದನಿಯೆತ್ತಿದ ಮಹಾನ್ ಕ್ರಾಂತಿ ಧರ್ಮವಾಗಿ ಕಾಣಿಸಿಕೊಂಡಿರುವುದು ಈ ಬಸವಧರ್ಮ.

ಶರಣ ಸಾಹಿತ್ಯಕ್ಕೆ ಧರ್ಮದ ಬೆನ್ನೆಲುಬಿದ್ದರೂ, ಶುಷ್ಕ ಧರ್ಮದ ಬೋಧನೆ ಅದರ ಗುರಿಯಾಗಿರಲಿಲ್ಲ. ಧರ್ಮದ ಹೆಸರಿನಲ್ಲಿ ಬೆಳೆದ ಕಂದಾಚಾರದ ಜಿಡ್ಡು ಮುಸುಕಿ ಧರ್ಮವೇ ಕಾಣದ ಸ್ಥಿತಿ ಪ್ರಾಪ್ತವಾದಾಗ ಶರಣರು ಆ ಜಿಡ್ಡನ್ನೆಲ್ಲ ತೊಳೆದು ತೆಗೆದು ಧರ್ಮವಾವುದು ಎಂಬುದನ್ನು ತೋರಿಸುವ ಮಹಾತ್ಕಾರ್ಯ ಮಾಡಿರುವುದೇ ಅವರ ಧರ್ಮದೃಷ್ಟಿಯಾಗಿತ್ತು.

> "ಶಿವನೇ ದೈವ, ಕೊಲ್ಲದಿಪ್ಪುದೇ ಧರ್ಮ
> ಸಕಲ ಜೀವಾತ್ಮರಿಗೆ ಲೇಸನೆ ಬಯಸುವ
> ಶರಣರೇ ಕುಲಜರು
> ದಯವೇ ಧರ್ಮದ ಮೂಲವಯ್ಯಾ"

ಧರ್ಮದ ಸ್ವರೂಪ ತಿರುಳನ್ನು ತಿಳಿಸುವುದರ ಜೊತೆಗೆ ಧರ್ಮಾಚರಣೆಗೆ ಅಂತರಂಗ ಶುದ್ಧಿ ಬಹಿರಂಗ ಶುದ್ಧಿಯ ಅವಶ್ಯಕತೆ ಎತ್ತಿ ತೋರಿಸಿದವರು ಶರಣರು. ಖಡಾಖಂಡಿತವಾಗಿ ಸಮಾಜ ಒಪ್ಪಿತವಲ್ಲದ ಜಾತಿ ವ್ಯವಸ್ಥೆಯನ್ನು ತಿರಸ್ಕರಿಸಿದ್ದಾರೆ ಶರಣರು.

**ಅಡಿ ಟಿಪ್ಪಣಿಗಳು :**


1. **ಬಸವರಾಜ ಬಲ್ಲೂರ (ಸಂ) : ಕಲ್ಯಾಣದ ಪಣತಿ : 2004 . ನಾವು ಪ್ರಕಾಶನ ಬೀದರ**
2. **ಚಂದ್ರಶೇಖರಯ್ಯ ಎಂ.ಜಿ. : ಬಸವಣ್ಣ ಜೀವನ – ಸಾಧನೆ . 2009 . ಕ.ಸಾ.ಪ. ಬೆಂಗಳೂರು.**
3. **ರಂಜಾನ್‌ದರ್ಗಾ : ಜಾತಿ ವ್ಯವಸ್ಥೆಗೆ ಸವಾಲಾದ ಶರಣರು . 2013 . ಲೋಹಿಯಾ ಪ್ರಕಾಶನ ಬಳ್ಳಾರಿ.**